ಈ ದಿನ ದಿನಾಂಕಃ 11-11-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಅರೋಪಿ ಪರ ಶ್ರೀ ಎಸ್ ಹೆಚ್ ವಕೀಲರಿಂದಃ</u>**

ನಿಪಿ-1ರಲ್ಲಿ ಕಾಣಿಸುತ್ತಿರುವ ಸಹಿ ಆರೋಪಿಯದ್ದು, ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 26-04-2023 ಪ್ರಾಂಸರಿ ನೋಟಾಗಿದ್ದು ಸದರಿ ದಾಖಲೆಯ 2ನೇ ಪುಟದಲ್ಲಿ ಕಾಣಿಸುತ್ತಿರುವ ಸಹಿ ಯಾರದು ಎಂದು ನನಗೆ ಗೊತ್ತಿಲ್ಲ. ನಿಪಿ-1ರಲ್ಲಿ ಕಾಣಿಸುತ್ತಿರುವ ಸಹಿಗೂ ಪ್ರಾಂಸರಿ ನೋಟಿನಲ್ಲಿರುವ ಸಹಿ ಒಂದೇ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ 2 ನೇ ಪುಟದಲ್ಲಿ ಕಾಣಿಸುತ್ತಿರುವ ಸಹಿ ಯಾರದು ಎಂದು ನನಗೆ ಗೊತ್ತಾಗುತ್ತಿಲ್ಲ. ಅರೋಪಿ ನನ್ನ ಬಳಿ ದಿಃ 12-03-2023 ರಂದು ದೂರಿನಪ್ರಕಾರ ನನ್ನ ಬಳಿ ಸಾಲವನ್ನು ಪಡೆದಿರುತ್ತಾರೆ. ನಾನು ಆರೋಪಿಗೆ ಸಾಲವನ್ನು ಕೊಡುವ ಸಮಯಕ್ಕೆ ನನ್ನನ್ನು ಮತ್ತು ಆರೋಪಿಯನ್ನು ಹೊರತಪಡಿಸಿ ಬೇರೆ ಯಾರು ಇರಲಿಲ್ಲ. ನನ್ನ ಬಳಿ ಆರೋಪಿಗೆ ಸಾಲ ಕೊಡುವ ಸಮಯಕ್ಕೆ 15 ಲಕ್ಷ ರೂ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ, ನಾನು ರೈತ. ನನಗೆ ವಾರ್ಷಿಕ 6-7 ಲಕ್ಷ ರೂ ಕೃಷಿಯಾಧಾಯ ಬರುತ್ತದೆ. ನಮ್ಮ ಮನೆಯಲ್ಲಿ 4 ಜನ ಇದ್ದೇವೆ. ನಾವು 4 ಜನ ರೈತರು. ನಮ್ಮ ಮನೆಗೆ ತಿಂಗಳಿಗೆ 2-3 ಸಾವಿರ ರೂ. ಖರ್ಚು ಬರುತ್ತದೆ. ವಾರ್ಷಿಕ 40-50 ಸಾವಿರ ರೂ ಬೇಕಾಗುತ್ತದೆ. ನಮಗೆ ಸದರಿ ವ್ಯವಸಾಯದಿಂದ ವಾರ್ಷಿಕ ಖರ್ಚು ವೆಚ್ಚಗಳನ್ನು ಕಳೆದು 6 ಲಕ್ಷ ರೂ ಉಳಿಯುತ್ತದೆ.

2023ರಲ್ಲಿಯೂ ನನಗೆ ವಾರ್ಷಿಕ 6 ಲಕ್ಷ ಆದಾಯವಿತ್ತು ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಕೊಟ್ಟ ಸಾಲ ಸದರಿ ಕೃಷಿ ಮೂಲದಿಂದಲೇ ಬಂದಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಅರೋಪಿಗೆ ನಗದಾಗಿ ಹಣವನ್ನು ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಬೇರೆಯವರಿಗೆ 20 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಸಾಲವಾಗಿ ಕೊಡುವಾಗ ಚೆಕ್ ಮುಖಾಂತರವೇ ಕೊಡಬೇಕು ಎಂಬ ಕಾನೂನು ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಗೆ 2023 ನೇ ಸಾಲಿನಲ್ಲಿ 15 ಲಕ್ಷ ರೂ. ಸಾಲ ಕೊಡಲು ನಾನು ಸದೃಢನಲ್ಲ ಎಂದರೆ ಸರಿಯಲ್ಲ.

ನಾನು 2023 ನೇ ಸಾಲಿನಲ್ಲಿ ಸದರಿ ಸಾಲದ ಮೊತ್ತವನ್ನು ಹೊಂದಿದ್ದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಆದಾಯ ನನಗೆ ಅಡಿಕೆಯಿಂದ ಬಂದಿರುತ್ತದೆ. ನಾನು ತುಮ್ ಕೋಸ್ ನಲ್ಲಿ ಷೇರುದಾರನಲ್ಲ. ಸದರಿ ಅಡಿಕೆಯನ್ನು ಯಾರಿಗೆ ಮಾರಾಟ ಮಾಡಿದೆ ಎಂಬ ಬಗ್ಗೆಯಾಗಲಿ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

ಆರೋಪಿ ಸರ್ಕಾರಿ ನೌಕರಳು ಎಂದರೆ ಸರಿ. ಆಕೆಗೆ ಮಾಹೆಯಾನ 50-60 ಸಾವಿರ ರೂ ವೇತನ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಸದರಿ 15 ಲಕ್ಷ ಮೊತ್ತದ ಹಣವನ್ನು ನನ್ನಿಂದ ಸಾಲವಾಗಿ ಪಡೆಯುವಂತಹ ಪ್ರಮೇಯ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಆರೊಪಿಗೆ ಲೀಗಲ್ ನೋಟಿಸನ್ನು ಜಾರಿ ಮಾಡಿದರೆ ಸದರಿಯವರು ನನ್ನ ನೋಟಿಸಿಗೆ ಮರುತ್ತರ ಕೊಡುವುದನ್ನು ತಪ್ಪಿಸುವ ಸಲುವಾಗಿ ಮತ್ತು ನನ್ನ ವಿರುದ್ದ ಕಾನೂನು ಕ್ರಮ ಕೈಗೊಳ್ಳುವುದನ್ನು ನಿರ್ಬಂಧಿಸುವ ಸಲುವಾಗಿ ಅವರಿಗೆ ನಿಪಿ-3 ರಂತೆ ಯಾವುದೇ ನೋಟಿಸನ್ನು ಜಾರಿ ಮಾಡದೆ ಈ ಪ್ರಕರಣದ ದಾಖಲಿಸಿದ್ದೆನೆ ಎಂದರೆ ಸರಿಯಲ್ಲ, ನಾನು ಬೇರೆ ಯಾರಿಗೋ ನೋಟಿಸನ್ನು ಜಾರಿ ಮಾಡಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಪಿರ್ಯಾದನ್ನು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ಆರೋಪಿಗೆ ಈ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ತರುವಾಯವೇ ತನ್ನ ವಿರುದ್ದ ಪ್ರಕರಣ ದಾಖಲಾಗಿರುವುದು ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಫೋನ್ ಮಾಡಿಯೂ ಸಹ ತಿಳಿಸಿದ್ದೆ ಎಂದು ನುಡಿಯುತ್ತಾರೆ. ನಾನು ಫೋನ್ ಮುಖಾಂತರ ತಿಳಿಸಿದ ತರುವಾಯ ಬ್ಯಾಂಕಿಗೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೋಟಿಸನ್ನು ಸಹ ಕಳುಹಿಸಿರುತ್ತೇನೆ. ಸದರಿ ನೋಟಿಸನ್ನು ಯಾವ ದಿನಾಂಕದಂದು ಕಳುಹಿಸಿದ್ದೆ ಎಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ. ನಿಪಿ-3ರಲ್ಲಿ ಬರೆದ ಸಂಗತಿಗಳು ತಿಳಿದಿದ್ದೀರ ಎಂದರೆ ಸಾಕ್ಷಿ ನಾನು ಓದಿದ್ದು ಈಗ ಮರೆತುಹೋಗಿದ್ದೆನೆ ಎಂದು ನುಡಿಯುತ್ತಾರೆ. ನಾನು ಸದರಿ ನೋಟಿಸಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ನಿಪಿ-3 ರ ಪುಟ ಸಂಖ್ಯೆ 2 ರಲ್ಲಿನ ಸಹಿ ಯಾರದು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.

ಈ ದಿನ ದಿನಾಂಕಃ23-10-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ  ಅರೋಪಿ ಪರ ಶ್ರೀ ಎಸ್ ಹೆಚ್ ವಕೀಲರಿಂದಃ**

ನನ್ನ ಪಿರ್ಯಾದಿನಲ್ಲಿ ಆರೋಪಿಯ ವಯಸ್ಸು ನಮೂದಿಸಿಲ್ಲ ಎಂದರೆ ಸರಿ. ಹಾಗಾಗಿ ಆರೋಪಿ ನನಗೆ ಪರಿಚಿತಳಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿ ನಮ್ಮ ಊರಿನ ಪಕ್ಕದ ಹಳ್ಳಿಯವರು. ಸದರಿ ಆರೋಪಿಯ ಗಂಡನಾದ ಶಿವಕುಮಾರ್ ಎನ್ನುವವರು ಬಸ್ ಚಾಲಕನಾಗಿದ್ದ ಕಾರಣ ನನಗೆ ಪರಿಚಿತರು. ಸದರಿ ಆರೋಪಿಯ ಪರಿಚಯವನ್ನು ಆರೋಪಿಯ ಗಂಡನೇ ಸುಮಾರು 2 ವರ್ಷಗಳ ಹಿಂದೆ ನನಗೆ ನಮ್ಮ ಮನೆಯಲ್ಲಿ ಮಾಡಿಕೊಟ್ಟಿರುತ್ತಾನೆ. ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ.  ಸದರಿ ಆರೋಪಿಯ ಪರಿಚಯ ನನಗೆ 5 ವರ್ಷಗಳಿಂದ ಇದೆ. ನಾನು ಈಗ ತಾನೇ ಸದರಿ ಆರೋಪಿಯ ಪರಿಚಯ 2 ವರ್ಷಗಳ ಹಿಂದೆ ಇದೆ ಎಂದು ಸಾಕ್ಷ್ಯ ನುಡಿದಿದ್ದು ಈಗ 5 ವರ್ಷಗಳಿಂದ ಪರಿಚಯ ಎಂದು ಹೇಳುತ್ತಿರುವ ಕಾರಣ ಸದರಿ ಹೇಳಿಕೆಯಲ್ಲಿ ಯಾವುದು ನಿಜ ಎಂದರೆ ಸಾಕ್ಷಿ ಆರೋಪಿ ನನಗೆ 5 ವರ್ಷಗಳಿಂದ ಪರಿಚಯ ಎಂದು ನುಡಿಯುತ್ತಾರೆ. ನನಗೆ ಆರೋಪಿ ಪರಿಚಿತಳಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿ ನನಗೆ ಆಕೆಯ ಗಂಡನಿಂದ ಪರಿಚಿತಳೆಂದು ನನ್ನ ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ದುಡ್ಡನ್ನು ನಾನು ಆರೋಪಿಗೆ ಕೊಟ್ಟಿರುವ ಕಾರಣ ಸದರಿ ವಿಚಾರವನ್ನು ನಾನು ನಮೂದಿಸಿಲ್ಲ ಎಂದು ನುಡಿಯುತ್ತಾರೆ.  ಆರೇಪಿ ನನಗೆ ಎಷ್ಟು ವರ್ಷಗಳಿಂದ ಪರಿಚಯ ಮತ್ತು ಯಾರಿಂದ ಪರಿಚಿತಳು ಎಂದು ನಾನು ನನ್ನ ಪಿರ್ಯಾದಿನಲ್ಲಿ ಅಥವಾ ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.  ಸದರಿ ವಿಚಾರವನ್ನು ಪಿರ್ಯಾದಿನಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಅವಶ್ಯಕತೆಯಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ಪಿರ್ಯಾದಿನಲ್ಲಿ ನಮೂದಿಸಿರುವಂತೆ ನಮ್ಮ ಮನೆಯಲ್ಲಿ ಅಡಿಕೆ ಮಾರಿದ ಮತ್ತು ಮನೆಯವರು ಉಳಿತಾಯ ಮಾಡಿದ ಹಣವನ್ನು ನಮ್ಮ ಮನೆಯಲ್ಲಿ

ಇಟ್ಟಿದ್ದ ಹಣವನ್ನು ನಾನು ಆರೋಪಿಯ ಗೃಹಕೃತ್ಯದ ಉದ್ದೇಶಕ್ಕಾಗಿ ನಾನು ನಮ್ಮ ಮನೆಯಿಂದ ನಗದಾಗಿ ತೆಗೆದುಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಪಿರ್ಯಾದಿನಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಮ್ಮ ವಕೀಲರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ ಹಾಗಾಗಿ ನನ್ನ ಪ್ರಮಾಣಪತ್ರಕ್ಕೆ ಬರೆದಿರುವ ಸಂಗತಿ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರ ಸಲಹೆಯನ್ನು ಪಡೆದು ನಾನು ಬೆರಳಚ್ಚು ಮಾಡಿಸಿರುತ್ತೆನೆ ಎಂದು ನುಡಿಯುತ್ತಾರೆ.

ನಾನು ದಿಃ 04-10-2023ರಂದು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿನ ಕಲಂ ನಂ 1 ರಲ್ಲಿರುವ ಚೆಕ್ ನಂ 348762 ದಿಃ 14-02-2023 ಎಂದು ನಮೂದು ಇದೆ ಎಂದರೆ ಸರಿ. ನನಗೆ ಒಂದು ಚೆಕ್‌ನ್ನು ಪಡೆದಾಗ ಅದನ್ನು ಎಷ್ಟು ದಿನದೊಳಗೆ ಬ್ಯಾಂಕಿಗೆ ಸಲ್ಲಿಸಬೇಕು ಎಂಬ ಬಗ್ಗೆ ಮಾಹಿತಿ ಇಲ್ಲ. ನಾನು ಐ ಟಿ ಐ ವಿಧ್ಯಾಭ್ಯಾಸ ಮಾಡಿದ್ದೆನೆ. ನನಗೆ ಸದರಿ ಬ್ಯಾಂಕಿನ ವ್ಯವಹಾರ ತಿಳಿದಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಅದರಂತೆ ನನ್ನ ಸಾಕ್ಷಿಯ ಹೇಳಿಕೆಯಂತೆ ದಿಃ14-02-2023 ರಿಂದ 13-05-2023 ಕ್ಕೆ 3 ತಿಂಗಳು ಅವಧಿ ಮುಗಿದು ಚೆಕ್‌ನ ವ್ಯಾಲಿಡಿಟಿ ಮುಗಿದಿರುತ್ತದೆ ಎಂದರೆ ಸಾಕ್ಷಿ ಆರೋಪಿ ಯಾರ ದಿನಾಂಕಂದು ಚೆಕ್‌ನ್ನು ಬರೆದುಕೊಟ್ಟರೋ ಅದರ ಮಾರನೇ ದಿನ ಸದರಿ ಚೆಕ್ ನ್ನು ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಂತೆ ದಿಃ 14-02-2023 ಚೆಕ್ ನ ದಿನಾಂಕ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

ಸಿಸಿ 1846/2023

PW1

02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.